

# ಸೈ–ಫೈ ಲೋಕದಲ್ಲಿ...

**ಒಂದಿಷ್ಟು ಜನ ಭೂಮಿಯೋ ನೀರೋ ಆಕಾಶವೋ ಗೊತ್ತಾಗದಂಥ ಜಾಗದಲ್ಲಿ ಪ್ರಯಾಸದಿಂದ ನಡೆಯುತ್ತಿದ್ದಾರೆ. ಎಲ್ಲರ ಕೈಯಲ್ಲೂ ಗನ್‌ಗಳಿವೆ, ಒಬ್ಬನನ್ನು ಬಿಟ್ಟು.**

■ ಗೌರಿ

ಸೈ–ಫೈ (SciFi)ಇವುದು ಜನಪ್ರಿಯವಾದ ಸಿನಿಮಾ ಪ್ರಕಾರ. ದಿನದಿಂದ ದಿನಕ್ಕೆ ವಿಜ್ಞಾನದ ಆವಿಷ್ಕಾರಗಳ ಕೈಗೊಂಬೆ ಆಗುತ್ತಿರುವ ಮನುಷ್ಯನ ಭವಿಷ್ಯ ಏನಾಗಬಹುದು ಎಂಬ ಪ್ರಶ್ನೆಯಿಟ್ಟುಕೊಂಡು ಬಂದ ಹಲವು ಸಿನಿಮಾಗಳು ಯಶಸ್ವಿಯಾಗಿವೆ. ಕಲ್ಪನೆ ಮತ್ತು ವಿಜ್ಞಾನ ಎರಡನ್ನೂ ಮಿಶ್ರಣ ಮಾಡಿ ತಂತ್ರಜ್ಞಾನದ ಒಗ್ಗರಣೆಯಲ್ಲಿ ತಯಾರಾದ ರಂಜನೆಯ ರುಚಿ ಮೈಮರೆಸುವಂಥದ್ದು. ಈ ರುಚಿಗೆ ಜೀವನದರ್ಶನದ ಔಷಧೀಯ ಗುಣ ಸೇರಿಬಿಟ್ಟರಂತೂ ಮತ್ತೊಂದೇ ಮಜಲಿಗೆ ಏರುತ್ತದೆ.

ವಿಜ್ಞಾನದ ತರ್ಕ, ಕಲ್ಪನೆಯ ವಿಲಾಸ, ತಂತ್ರಜ್ಞಾನದ ಕೌಶಲ, ಜೀವನದರ್ಶನ ಔಷಧ ಎಲ್ಲವೂ ಸೇರಿದ ಒಳ್ಳೆಯ ಮಾದರಿ 'ಅವತಾರ್' ಸಿನಿಮಾ.

'ಇರಾಡಿಕೇಶನ್' ಕೂಡ ಸೈ–ಫೈ ಪ್ರಕಾರಕ್ಕೆ ಸೇರಿಸಬಹುದಾದ ಕಿರುಚಿತ್ರ. ಒಂಬತ್ತು ನಿಮಷಗಳ ಈ ಕಿರುಚಿತ್ರಕ್ಕೆ ಮೊದಲನೇ ಕ್ಷಣದಿಂದ ಕೊನೆಯ ಕ್ಷಣದವರೆಗೆ ಮೈಮರೆಸಿ ನೋಡಿಸಿಕೊಂಡು ಹೋಗುವ ಆಕರ್ಷಣೆಯಿದೆ. ಹಾಗೆ ನೋಡಿದರೆ ಇದಕ್ಕೆ ಒಂದು ಸ್ಪಷ್ಟವಾದ ಕಥೆಯ ಎಳೆಯೇ ಇಲ್ಲ. ಇಲ್ಲಿ ಕಥೆಗಿಂತ ಮೂಡ್‌ಗೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಅಂದರೆ ವಿಎಫ್‌ಎಕ್ಸ್ ತಂತ್ರಜ್ಞಾನದಿಂದ ಇದರಲ್ಲಿ ಸೃಷ್ಟಿಸಿದ ಲೋಕ ನಮ್ಮನ್ನು ಗಾಢವಾಗಿ ಆವರಿಸಿಕೊಳ್ಳುವಂಥದ್ದು.

ಅದು ಭೂಮಿಯೋ ಮತ್ತೊಂದು ಗ್ರಹವೋ ಹೇಳಲು ಸಾಧ್ಯವಿಲ್ಲದಂಥ ಪರಿಸರ. ಅಲ್ಲಿನ ಎಲ್ಲರಿಗೂ ಆಮ್ಲಜನಕ ಮಾಸ್ಕ್ ಇದೆ. ಉಸಿರಾಟದ ಶಬ್ದ ಒಂದು ರೀತಿಯ ಭೀತಿ ಹುಟ್ಟಿಸುವ ಹಾಗಿದೆ. ಒಂದಿಷ್ಟು ಜನ ಭೂಮಿಯೋ ನೀರೋ ಅವಕಾಶವೋ ಗೊತ್ತಾಗದಂಥ ಜಾಗದಲ್ಲಿ ಪ್ರಯಾಸದಿಂದ ನಡೆಯುತ್ತಿದ್ದಾರೆ. ಎಲ್ಲರ ಕೈಯಲ್ಲೂ ಗನ್‌ಗಳಿವೆ, ಒಬ್ಬನನ್ನು ಬಿಟ್ಟು.

ಆ ಒಬ್ಬನನ್ನು ಯಾವುದೋ ವಿಚಿತ್ರ ಶಕ್ತಿಯ ಪ್ರಯೋಗಕ್ಕಾಗಿ ಅವರು ಅಲ್ಲಿಗೆ ಕರೆತಂದಿದ್ದಾರೆ, ಅವನಿಗೆ ಪ್ರಾಣಬೆದರಿಕೆ ಹಾಕಿ ಆ ವಿಚಿತ್ರ ಶಕ್ತಿಯನ್ನು ಮುಟ್ಟುವಂತೆ ಹೇಳುತ್ತಿದ್ದಾರೆ. ಅಂದರೆ ಅವನು ಅಲ್ಲಿ ಪ್ರಯೋಗಪಶು. ಇದೆಲ್ಲವೂ ಒಂದು ಸುಸಂಗತ ಕತೆಯಾಗಿಯಾಗಲಿ, ಸಂಪೂರ್ಣ ವಿವರದ ಮೂಲಕವಾಗಲಿ ನಿರ್ದೇಶಕರು ತೋರಿಸುವುದಿಲ್ಲ. ಜನರ ಮನಸಲ್ಲಿ ಅನ್ಯಗ್ರಹ, ವಿಶೇಷ ಶಕ್ತಿ, ಭವಿಷ್ಯದ ಮಾನವಸ್ಥಿತಿಗಳ ಮೇಲೆ ಈಗಾಗಲೇ ಸೈ–ಫೈ ಸಿನಿಮಾ, ಸಾಹಿತ್ಯ ಕೃತಿಗಳು ಬಿತ್ತಿರುವ ಕಲ್ಪನೆಯ ಬೆಳೆಯನ್ನೇ ಬಳಸಿಕೊಂಡು, ಕಥನದ ಬಿಂದುವನ್ನಷ್ಟೇ ನಿರ್ದೇಶಕರು ಇಡುತ್ತ ಹೋಗುತ್ತಾರೆ. ಅವು ರೇಖೆಗಳಾಗಿ ಒಂದುಗೂಡುವುದು ನೋಡುಗನ ಮನಸಲ್ಲಿಯೇ. ಈಗಾಗಲೇ ರೂಪುಗೊಂಡು,ಸಾಕಷ್ಟು ಸವೆದಿರುವ ಸಿದ್ಧಮಾದರಿಗಳನ್ನು ಬಳಸಿಕೊಂಡೇ ಅದರಾಚೆಗೆ ಜಿಗಿಯುವ ಪ್ರಯತ್ನ ಇದು. ಗಂಟೆಯ ಶಬ್ದ ಕೇಳಿದ ಕೂಡಲೇ ನಮ್ಮ ಮನಸಲ್ಲಿ ದೇವಸ್ಥಾನದ ಅಸ್ಪಷ್ಟ ಚಿತ್ರವೊಂದು ಮೂಡಿನಿಲ್ಲುತ್ತದಲ್ಲ, ಹಾಗೆಯೇ ಕೆಲವು ಸೂಚನೆಗಳನ್ನು ನೀಡುವುದರ ಮೂಲಕ, ಪ್ರೇಕ್ಷಕನ ಮನಸಲ್ಲಿನ ಸಿದ್ಧಕಲ್ಪನೆಯನ್ನೇ ನೆನಪಿಸಿ ಕತೆ ಹೇಳುವ ಕ್ರಮ ಇದು.

ದುರಾಸೆಯ ಈಡೇರಿಕೆಯಲ್ಲಿ ನಿರತರಾಗಿರುವ ದುಷ್ಟ ಜನರು ತಮ್ಮ ದುರಾಸೆಗೆ ಬಲಿಯಾಗುವುದು ಮತ್ತು ಅಮಾಯಕ ಮನುಷ್ಯನೊಬ್ಬ ಅವರ ಜಾಲದಿಂದ ಪಾರಾಗುವುದು ಈ ಕಿರುಚಿತ್ರದ ಒಟ್ಟಾರೆ ಕಥೆ ಎನ್ನಬಹುದು. ಆದರೆ ಈ ಕಿರುಚಿತ್ರದ ಮುಖ್ಯ ಶಕ್ತಿ ಇರುವುದು ಅದು ಕಟ್ಟಿಕೊಡುವ ವಾತಾವರಣದಲ್ಲಿ. ತುಂಬ ದಟ್ಟವಾದ ವಾತಾವರಣವನ್ನು ನಿರ್ಮಿಸುವ ನಿರ್ದೇಶಕರು, ಕಥೆಯ ಹಂಗನ್ನೂ ನಿರೀಕ್ಷಿಸದೆ ಮೈಮರೆಯುವಂತೆ ಮಾಡುತ್ತಾರೆ. ಅದೇ ಈ ಕಿರುಚಿತ್ರದ ಶಕ್ತಿ, ಮತ್ತೊಂದು ಕಡೆಯಿಂದ ನೋಡಿದರೆ ದೌರ್ಬಲ್ಯವೂ ಹೌದು. ಆದರೆ ಈ ದೌರ್ಬಲ್ಯ ಇಂದಿನ ಬಹುತೇಕ ಸೈ–ಫೈ ಚಿತ್ರಗಳಲ್ಲಿಯೂ ಕಾಣಿಸುವ ದೌರ್ಬಲ್ಯವಾದ್ದರಿಂದ ಅದೊಂದೇ ಕಾರಣಕ್ಕೆ ಈ ಕಿರುಚಿತ್ರವನ್ನು ತಿರಸ್ಕರಿಲಾಗದು. ಆ ಕೊರತೆಯನ್ನು ಬದಿಗಿಟ್ಟು ನೋಡಿದರೆ ಒಂಬತ್ತು ನಿಮಿಷಗಳ ಗಾಢ ಅನುಭವದ ಗುಚ್ಛವನ್ನು ಈ ಕಿರುಚಿತ್ರ ನೀಡುತ್ತದೆ.



**ಹೆಸರು:** ಇರಾಡಿಕೇಶನ್
**ನಿರ್ದೇಶಕ:** ಸವಾ ಜಿವ್ಕೋವಿಕ್
**ಆ್ಯನಿಮೇಶನ್:** ಟೇಕ್ ಆನ್
**ಸಂಗೀತ:** ಈರ್ಝುಫ್ ಸ್ವೆಮಿರಾ
**ಧ್ವನಿ ವಿನ್ಯಾಸ:** ಮಾರ್ಕೊ ಜಿವೊನೊವಿಕ್
**ತಾರಾಗಣ:** ನೆಬೋಜ್ಸಾ ಜೆಝುಫ್, ಡೆಜಾನ್ ಜಾವೊನೊವಿಕ್, ಲಾಜಾರ್ ಡುಕಿಕ್

ಈ ಕಿರುಚಿತ್ರ ವೀಕ್ಷಣೆಗೆ https://bit.ly/3mwgB0t ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.